**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ನ್ಯಾಯಾಲಯ, ದೇವದುರ್ಗ.**

**CC No.346/2023**

**CW -1 PW-1**

| | | |
|---|---|---|
| ಸಾಕ್ಷಿದಾರನ ಹೆಸರು | ಃ | ನಾಗರಾಜ |
| ತಂದೆ | ಃ | ಶಿವರಾಜ |
| ವಯಸ್ಸು | ಃ | 23 |
| ಉದ್ಯೋಗ | ಃ | ವಿದ್ಯಾರ್ಥಿ |
| ವಾಸಸ್ಥಳ | ಃ | ರಾಮದುರ್ಗ |
| ಪ್ರಮಾಣಿಕರಿಸಿದ ದಿನಾಂಕ | ಃ | **02-04-2026** |

---

**ಮುಖ್ಯ ವಿಚಾರಣೆ:- ಮಾನ್ಯ ಸ.ಸ.ಅ ರವರಿಂದ**

ಆರೋಪಿತರು ಗೊತ್ತು. ಚಾಸಾ-2 ರಿಂದ 6 ಗೊತ್ತು. ದಿನಾಂಕ 13.01.2023 ರಂದು ಬೆಳಿಗ್ಗೆ 11 ಗಂಟೆಗೆ ನಾನು ಮತ್ತು ಚಾಸಾ-4 ಹೊಲದಲ್ಲಿ ಕೆಲಸ ಮಾಡುತ್ತಿದ್ದಾಗ ಆರೋಪಿತರು ಬಂದು ಈ ಜಮೀನಿನಲ್ಲಿ ಏಕೆ ಕೆಲಸ ಮಾಡುತ್ತೀರಿ ಲಂಗಾ ಸೂಳೇ ಮಕ್ಕಳೇ ಎಂದು ಅವಾಚ್ಯವಾಗಿ ಬೈದಿರುತ್ತಾರೆ. 1 ನೇ ಆರೋಪಿ ಜಹಿರುದ್ದೀನ್ ಚಾಸಾ-4 ರವರಿಗೆ ಸಲಿಕೆಯಿಂದ ಬೆನ್ನಿಗೆ ಮತ್ತು ಎದೆಗೆ ಹೊಡೆದಿರುತ್ತಾನೆ. 1, 2 ಮತ್ತು 5 ನೇ ಆರೋಪಿತರು ನನಗೆ ಸಲಿಕೆ ಮತ್ತು ಕಟಿಗೆಯಿಂದ ಬೆನ್ನಿಗೆ ಹೊಡೆದು ರಕ್ತಗಾಯ ಮಾಡಿರುತ್ತಾರೆ. ಚಾಸಾ-5 ಮತ್ತು 6 ರವರು ಜಗಳ ಬಿಡಿಸಿರುತ್ತಾರೆ. ಇನ್ನೊಂದು ಸಲ ಜಮೀನಿಗೆ ಬಂದರೆ ಜೀವ ಸಹಿತ ಬಿಡುವುದಿಲ್ಲ ಎಂದು ಜೀವದ ಬೆದರಿಕೆ ಹಾಕಿರುತ್ತಾರೆ. ನಂತರ ಅದೇ ದಿನ ದೂರನ್ನು ನೀಡಿರುತ್ತೇನೆ. ದೂರನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ-1 ಎಂದು ಸಹಿಯನ್ನು ನಿಪಿ-1ಎ ಎಂದು ಗುರುತಿಸಲಾಯಿತು. ನಂತರ ಮರುದಿನ ಬೆಳಿಗ್ಗೆ 11 ರಿಂದ 12 ಗಂಟೆ ವರೆಗೆ ನಾನು ತೋರಿಸಿದ ಗುನ್ನೆ ಸ್ಥಳದಲ್ಲಿ ಪಂಚನಾಮೆಯನ್ನು ಮಾಡಿ ಸ್ಥಳದಿಂದ ಒಂದು ಖಾವುಳ್ಳ ಸಲಿಕೆ ಮತ್ತು ಒಂದು ಬಡಿಗೆಯನ್ನು ಜಪ್ತಿ ಮಾಡಿಕೊಂಡು ನನ್ನ ಸಹಿ ಪಡೆದಿರುತ್ತಾರೆ. ಪಂಚನಾಮೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ-2 ಎಂದು ಸಹಿಯನ್ನು ನಿಪಿ-2ಎ ಎಂದು ಗುರುತಿಸಲಾಯಿತು. ಪಂಚನಾಮೆ ಕಾಲಕ್ಕೆ ತೆಗೆದ ಭಾವಚಿತ್ರವನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ-3 ಎಂದು ಗುರುತಿಸಲಾಯಿತು.

**ಪಾಟೀ ಸವಾಲು:- ಆರೋಪಿತರ ಪರ SSP ವಕೀಲರಿಂದ**

ನನ್ನದು ರಾಮದುರ್ಗ ಗ್ರಾಮ ಆಗಿರುತ್ತದೆ. ರಡ್ಡೆಪ್ಪ ತಂದೆ ರಾಮಣ್ಣ, ಶಿವಪ್ಪ ತಂದೆ ಬೂದೆಪ್ಪ ನನಗೆ ಸಂಬಂಧಿಕರಾಗುವುದಿಲ್ಲ ಪರಿಚಯ ಇರುತ್ತಾರೆ. ಚಾಸಾ-2 ಮತ್ತು 3

ರವರನ್ನು ದಿನಾಂಕ 13.01.2023 ರಂದು ನೋಡಿರುತ್ತೇನೆ. ಸದರಿಯವರು ಬೆಳಿಗ್ಗೆ 11 ಗಂಟೆಗೆ ಜಗಳ ಬಿಡಿಸಲು ಬಂದಿದ್ದರು. ಠಾಣೆಗೆ ದೂರನ್ನು ನೀಡಲು ನಾನು ಮತ್ತು ನನ್ನ ತಂದೆ ಹೋಗಿರುತ್ತೇವೆ. ಪ್ರಕರಣ ದಾಖಲು ಮಾಡಲು ಸಂಜೆ 5 ಗಂಟೆಗೆ ಹೋಗಿರುತ್ತೇವೆ. ಗಲಾಟೆ ನಡೆದಾಗ ನಾನು ಬಿ.ಎ ಪದವಿದರನಾಗಿದ್ದೆ. ಸದರಿ ದಿನ ನಾನು ಕಾಲೇಜಿಗೆ ಹೋಗಿರಲಿಲ್ಲ. ಸ.ನಂ.5 ರಲ್ಲಿ ಒಟ್ಟು 4 ಎಕರೆ 15 ಗುಂಟೆ ಜಮೀನು ಇರುತ್ತದೆ. ದೂರಿನೊಂದಿಗೆ ನಾನು ನ್ಯಾಯಾಲಯಕ್ಕೆ ಪಹಣಿಯನ್ನು ನೀಡಿಲ್ಲ. ಸ.ನ.5 ರಲ್ಲಿ 21 ಎಕರೆ 38 ಗುಂಟೆ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. 7 ನೇ ಆರೋಪಿ ಹೆಂಡತಿ ಸ.ನಂ.5 ರಲ್ಲಿ 4 ಎಕೆರ 15 ಗುಂಟೆ ಖರೀದಿ ಮಾಡಿರುತ್ತಾಳೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಖರೀದಿ ಮಾಡಿದ ಜಮೀನಿನಲ್ಲಿ ಆರೋಪಿತರು ಸಾಗುವಳಿ ಮಾಡುತ್ತಿದ್ದಾಗ ನಾವು ಬಂದು ತಕರಾರು ಮಾಡಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿತರು ನಮ್ಮಗಳ ವಿರುದ್ದ ಕ್ರಿಮಿನಲ್ ಪ್ರಕರಣ ದಾಖಲು ಮಾಡಿದ್ದು ನನಗೆ ಗೊತ್ತಿಲ್ಲ. ಸದರಿ ಕ್ರಿಮಿನಲ್ ಪ್ರಕರಣ ದಾಖಲು ಮಾಡಿದ್ದು ಗೊತ್ತಿದ್ದರು ಸಹ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಜಮೀನಿಗೆ ಬೆಳಿಗ್ಗೆ 10.30 ರಿಂದ 11 ಗಂಟೆ ವರೆಗೆ ನಾನು ಮತ್ತು ಚಾಸಾ-4 ಹೋಗಿರುತ್ತೇವೆ. 7 ಜನ ಆರೋಪಿತರ ವಿರುದ್ದ ಪ್ರಕರಣ ದಾಖಲು ಮಾಡಿರುತ್ತೇವೆ. ಮೆಹಬೂಬ ತಂದೆ ಬಾಬುಸಾಬ ಎಂದು ನಮ್ಮ ಗ್ರಾಮದಲ್ಲಿ ಯಾರು ಇರುವುದಿಲ್ಲ. 7 ಜನರ ವಿರುದ್ದ ಪ್ರಕರಣ ದಾಖಲು ಮಾಡಿದ್ದು ಅವುರುಗಳಲ್ಲಿ ಜಹಿರುದ್ದೀನ್, ಬಾವುದ್ದೀನ್, ಚಾಂದಪಾಶ ಮತ್ತು ಮೆಹಬೂಬ್ ಇವರ ಹೆಸರು ಗೊತ್ತಿರುತ್ತದೆ ಉಳಿದವರ ಹೆಸರು ಗೊತ್ತಿಲ್ಲ. ಆರೋಪಿತರು ನಮ್ಮ ಮೇಲೆ ಪ್ರಕರಣ ದಾಖಲು ಮಾಡಿದ್ದರಿಂದ ಅದಕ್ಕೆ ಪ್ರತಿಯಾಗಿ ಯಾಹಿದೇ ಘಟನೆ ನಡೆಯದಿದ್ದರೂ ಆರೋಪಿತರ ವಿರುದ್ದ ಸುಳ್ಳು ದೂರನ್ನು ದಾಖಲು ಮಾಡಿರುತ್ತೇನೆ ಎಂದರೆ ಸರಿಯಲ್ಲ. ಘಟನೆ ನಡೆದ ನಂತರ ಚಾಸಾ-4 ರವರು ಆಸ್ಪತ್ರೆಗೆ ಒಬ್ಬರೇ ಹೋಗಿರುತ್ತಾರೆ. ನಂತರ ಆಸ್ಪತ್ರೆಯಿಂದ ಮನೆಗೆ ಬಂದಿರುತ್ತಾರೆ. ಸದರಿ ರಾಮಣ್ಣಾ ಇವರನ್ನು ಘಟನೆ ದಿನ ಪೋಲಿಸರು ದಸ್ತಗಿರಿ ಮಾಡಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಅದೇ ದಿನ ಆರೋಪಿತರಿಗೆ ಮತ್ತು ರಾಮಣ್ಣಾ ಇವರಿಗೆ ಜಾಮೀನು ಮಂಜೂರು ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಎಲ್ಲ ವಿಷಯ ಗೊತ್ತಿದ್ದರು ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ಸಲಿಕೆ ಮತ್ತು ಬಡಿಗೆಯಿಂದ ಆರೋಪಿತರು ಹೊಡೆದಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1 ನೇ ಆರೋಪಿ ಸಲಿಕೆ ಮತ್ತು ಕಟ್ಟಿಗೆಯಿಂದ ಚಾಸಾ-4 ರವರ ಬೆನ್ನಿಗೆ ಮತ್ತು ಎದೆಗೆ ಹೊಡೆದಿರುತ್ತಾನೆ ಎಂದರೆ ಸರಿಯಲ್ಲ. ಪೋಲಿಸರು ಠಾಣೆಯಲ್ಲಿ ನನ್ನ ಎಷ್ಟು ಸಹಿ ಪಡೆದಿರುತ್ತಾರೆ ನನಗೆ ಗೊತ್ತಿಲ್ಲ. ದೂರನ್ನು ನಾನೇ ಬರೆದುಕೊಟ್ಟಿರುತ್ತೇನೆ. ಘಟನ ಸ್ಥಳದ ಪೂರ್ವಕ್ಕೆ ಬಹದ್ದೂರ್ ಸಾಬ ಜಮೀನು, ಪಶ್ಚಿಮಕ್ಕೆ ಸಾಬಣ್ಣಾ ಜಮೀನು, ಉತ್ತರಕ್ಕೆ

ಜಹಿರುದ್ದೀನ್ ಜಮೀನು ಮತ್ತು ದಕ್ಷಿಣಕ್ಕೆ ಲಿಂಗಪ್ಪಗೌಡ ಜಮೀನು ಬರುತ್ತದೆ. ದಿನಾಂಕ 14.01.2023 ರಂದು ಪಿ.ಎಸ್.ಐ ಮತ್ತು ಅವರ ಸಿಬ್ಬಂದಿ ಪಂಚನಾಮೆಗೆ ಬಂದಿದ್ದರು. ಪಂಚನಾಮೆಗೆ ನಾನು ಸಹಿ ಮಾಡಿದ ಬಗ್ಗೆ ನೆನಪಿಲ್ಲ. ಪಂಚನಾಮೆಯಲ್ಲಿ ಬರೆದ ಸಂಗತಿಗಳನ್ನು ನನಗೆ ಓದಿ ಹೇಳಿರುತ್ತಾರೆ. ಪಂಚನಾಮೆಯಲ್ಲಿ ಮೇಲೆ ಹೇಳಿದಂತೆ ಚಕ್ಕಂದಿಯನ್ನು ನಮೂದು ಮಾಡಿರುತ್ತಾರೆ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಸಂಗತಿಗಳು ಸುಳ್ಳು ಇವೆ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ:- ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೇ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,
ದೇವದುರ್ಗ.